**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 684/2014**

**ಪಿ.ಡಬ್ಲ್ಯೂಃ 7**
**ಸಿ.ಡಬ್ಲ್ಯೂಃ 8**

| | |
|---|---|
| **ಹೆಸರು** | ಃ ಕೃಷ್ಣ ಅಲಿಯಾಸ್ ದೊಡ್ಡಮನೆ ಕೃಷ್ಣ |
| **ತಂದೆಯ ಹೆಸರು** | ಃ ಕೆಂಚಪ್ಪ |
| **ವಯಸ್ಸು** | ಃ 45 ವರ್ಷ |
| **ಉದ್ಯೋಗ** | ಃ ವ್ಯವಸಾಯ |
| **ವಾಸಸ್ಥಳ** | ಃ ಬಾವಿಕೆರ |

**ದಿನಾಂಕಃ 02-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ಇಸ್ವಿ 2014 ರಲ್ಲಿ ನಾನು ಮತ್ತು ಚಾ.ಸಾ-6 ಬೈಕ್ನಲ್ಲಿ ಬಾವಿಕೆರೆ ಕಡೆಯಿಂದ ತರೀಕೆರೆ ಕಡೆಗೆ ಬೆಳಗ್ಗೆ 11-00 ಗಂಟೆ ಸಮಯದಲ್ಲಿ ಬರುತ್ತಿರುವಾಗ, ಕೃಷಿ ಇಲಾಖೆಯ ವಿಶ್ವವಿದ್ಯಾನಿಲಯದ ಹತ್ತಿರ ಇರುವ ಚಾ.ಸಾ-8 ರವರ ಮನೆಯ ಹತ್ತಿರ ಜನರು ಗುಂಪು ಗೂಡಿದ್ದರು. ಆಗ ನಾವು ಹೋಗಿ ವಿಚಾರಿಸಲಾಗಿ, 1 ನೇ ಆರೋಪಿ, ಸೀತಾರಾಮು, ವೆಂಕಟೇಶ್ ರವರು ಈ ಜಾಗ ನಮ್ಮ ಹೆಸರಿಗೆ ಅಸೆಸ್ಮೆಂಟ್ ಆಗಿದ್ದು ಅದನ್ನು ಸ್ವಚ್ಛಗೊಳಿಸುತ್ತಿದ್ದೇವೆ ಎಂದು ತಿಳಿಸಿದರು. ಅರಸೀಕೆರೆ ಅಸೆಸ್ಮೆಂಟ್ ಸಂಖ್ಯೆ 2/ಬಿ,ಸಿ,ಡಿ ಎಂದು ನಮೂದಿಸಿದ ಅಸೆಸ್ಮೆಂಟ್ ಕಾಪಿಯನ್ನು ನಮಗೆ ಅವರು ತೋರಿಸಿದರು ಆಗ ಸದರಿ ಕಾಪಿಯನ್ನು ನಾನು ಗ್ರಾಮಪಂಚಾಯತಿ ಕಛೇರಿಗೆ ಹೋಗಿ ತಾಳೆ ನೋಡಿ ಪರಿಶೀಲಿಸಲಾಗಿ, ಸದರಿ 2/ಬಿ,ಸಿ,ಡಿ ಎನ್ನುವ ಅಸೆಸ್ಮೆಂಟ್ ಸಂಖ್ಯೆಯನ್ನು ಅಕ್ರಮವಾಗಿ, ಕಾನೂನುಬಾಹಿರವಾಗಿ 2 ನೇ ಆರೋಪಿಯು ನಮೂದಿಸಿರುವುದು ತಿಳಿದುಬಂದಿದ್ದು ಸದರಿ 2 ನೇ ಆರೋಪಿಯು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ.

2. ಅಸೆಸ್ಮೆಂಟ್ ನಲ್ಲಿ ಅಕ್ರಮವಾಗಿ ನಮೂದಾಗಿರುವ ಬಗ್ಗೆ ತಿಳಿದ ನಂತರ ನಾನು ಚಾ.ಸಾ-7, ಚಾ.ಸಾ-13 ಹಾಗೂ 15 ರವರ ಜೊತೆ ಸೇರಿ ಅರ್ಜಿಯನ್ನು ಡಿ.ಸಿ, ತಹಶೀಲ್ದಾರ್, ಇ.ಓ, ಸಿ.ಎಸ್. ಹಾಗೂ ಲೋಕಾಯುಕ್ತರಿಗೆ ಸಲ್ಲಿಸಿದೆವು. ಆರೋಪಿತರು ಅಕ್ರಮವಾಗಿ ಅಸೆಸ್ಮೆಂಟ್ ನಲ್ಲಿ ನಮೂದಿಸಿ ನಮ್ಮ ಜಾಗ ಎಂದು ಹೇಳುತ್ತಿದ್ದ ಜಾಗವು ಕೃಷಿ ಇಲಾಖೆಗೆ ಸೇರಿದ್ದು ಅವುಗಳ ವಿಸ್ತೀರ್ಣ ಸೀತಾರಾಮು ರವರಿಗೆ 40 ಇಂಟು 70, ವೆಂಕಟೇಶ್ ರವರಿಗೆ 25 ಇಂಟು 70, ಸಂದೇಶ್

ಶೆಟ್ಟಿ ರವರಿಗೆ *35* ಇಂಟು *70* ವಿಸ್ತೀರ್ಣದ ಜಾಗಗಳನ್ನು ಪಿ.ಡಿ.ಓ ರವರು ಬರೆದುಕೊಟ್ಟಿದ್ದರು. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

***ಪಾಟೀ ಸವಾಲು : 1ನೇ ಆರೋಪಿ ಪರ* ಶ್ರೀ ಎ ಆರ್ ಕೆ *ವಕೀಲರಿಂದ***

ನಾನು *8*ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಹಾಗೂ ಚಾಸಾ-*6* ರವರು ತರೀಕೆರೆಗೆ ಬೈಕಿನಲ್ಲಿ ಬಂದಿದ್ದ ದಿನಾಂಕ ನೆನಪಿರುವುದಿಲ್ಲ. ಸದರಿ ಬೈಕು ಸ್ಪ್ಲೆಂಡರ್ ಇರಬಹುದು ಆದರೆ ಸರಿಯಾಗಿ ಗಮನಿಸಿಲ್ಲ. ನಾನು ಹಾಗೂ ಚಾಸಾ-*6* ರವರು ತುಂಬಾ ಚೆನ್ನಾಗಿದ್ದೇವೇಂದರೆ ಸಾಕ್ಷಿಯು ತಕ್ಕಮಟ್ಟಿಗೆ ಇದ್ದೇವೆಂದು ನುಡಿಯುತ್ತಾರೆ. ನಾನು ಈಗ ಬಾವಿಕೆರೆ ಗ್ರಾಮ ಪಂಚಾಯ್ತಿಯ ಸದಸ್ಯನಾಗಿರುತ್ತೇನೆ. ಆದರೆ ಈ ಹಿಂದೆ ಚುನಾವಣೆಗೆ ಸ್ಪರ್ಧಿಸಿರುವುದಿಲ್ಲ. ನಾನು ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಸದಸ್ಯನಾಗಿರುತ್ತೇನೆ. ನಾನು ಚುನಾವಣೆಗೆ ನಿಂತಾಗ ನಮ್ಮ ಕ್ಷೇತ್ರದ ಎಂ ಎಲ್ ಎ ನಮಗೆ ಬೆಂಬಲಿಸಿ ಪ್ರಚಾರ ಮಾಡಿರುತ್ತಾರೆಂದರೆ ಸರಿಯಲ್ಲ. *1*ನೇ ಆರೋಪಿ ಜೆ ಡಿ ಎಸಿ ಪಕ್ಷದಿಂದ ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿ ಗೆದ್ದಿದ್ದರು ಎಂದರೆ ಸರಿ. ನನಗೂ *1*ನೇ ಆರೋಪಿಗೂ ಯಾವುದೇ ರಾಜಕೀಯ ದ್ವೇಷ ಇದೆ ಎಂದರೆ ಸರಿಯಲ್ಲ. *1*ನೇ ಆರೋಪಿ ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ಸರಿ. ವಿವಾದಿತ ಸ್ವಳವು ಕೃಷಿ ವಿಶ್ವವಿದ್ಯಾಲಯದ ಆವರಣದ ಕಾಂಪೌಂಡ್ ಒಳಗಡೆ ಇದೆ ಎಂದರೆ ಸರಿ. ವಿವಾದಿತ ಸ್ವಳದ ಪಕ್ಕ ರಹೀಂ ಹಾಗೂ ಖಲಂದರ್ ರವರ ಮನೆಗಳು ಇದ್ದು, ಸದರಿ ಜಾಗಗಳೂ ಸಹ ಕೃಷಿ ವಿಶ್ವವಿದಾಲಯದ ಆವರಣದ ಒಳಗಡೆ ಇರುತ್ತವೆಂದರೆ ಸರಿ. ವಿವಾದಿತ ಜಾಗಕ್ಕೆ ಸಂಬಂದಿಸಿ ಅಸೆಸ್‌ಮೆಂಟಿನಲ್ಲಿ ತಿದ್ದುಪಡಿಯಾದ ಬಗ್ಗೆ ನಾನು ಪರಿಶೀಲನೆ ಮಾಡಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುವುದಿಲ್ಲ. ಉಳಿದಂತೆ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ.

(*2*ನೇ ಆರೋಪಿ ಪರ ವಕೀಲರಾದ ಕೆ ಸಿ ಪರವಾಗಿ ಕೆ ಪಿ ವಕೀಲರು ಮೇಲ್ಕಂಡ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳಲು ಕೋರಿರುತ್ತಾರೆ. ಹಾಗಾಗಿ *2*ನೇ ಆರೋಪಿ ಪರವಾಗಿ ಮೇಲ್ಕಂಡ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯ್ತು)

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***